**ದಿನಾಂಕ 20-12-2018 ರಂದು ಬೆಳಗ್ಗೆ 11:30 ಗಂಟೆಗೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಮಾಹಿತಿ ಆಯೋಗದ 2017-18ನೇ ಸಾಲಿನ ವಾರ್ಷಿಕ ವರದಿಗೆ ಸಂಬಂಧಿಸಿದಂತೆ ಸಭೆಗೆ ಹಾಜರಾದ ಇಲಾಖೆಯೊಂದಿಗೆ ನಡೆದ ಸಭೆಯ ನಡವಳಿಗಳು.**

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2. ಶ್ರೀ ಎಂ.ಕೆ. ಭರ್ಮರಾಜಪ್ಪ, ಉಪ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ.
3. ಶ್ರೀ ಕೆ.ಎಸ್. ಹರೀಶ್, ಉಪ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ.
4. ಶ್ರೀ ಉಮಾ ವರದಯ್ಯಾ, ಅಧೀನ ಕಾರ್ಯದರ್ಶಿ (ಸೇ ಮತ್ತು ಸ), ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ.
5. ಶ್ರೀಮತಿ ಹೆಚ್.ಬಿ. ಪ್ರಫುಲ್ಲವತಿ, ಅಧೀನ ಕಾರ್ಯದರ್ಶಿಗಳು (ಆಡಳಿತ-1), ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.
6. ಶ್ರೀಮತಿ ಬಿ.ಎನ್. ಸುಮತಿ, ಅಧೀನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.
7. ಶ್ರೀ ಕೆ.ಎನ್. ಜಗದೀಶ ರೆಡ್ಡಿ, ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.
8. ಶ್ರೀ ಸೂರ್ಯನಾರಾಯಣ ಭಟ್, ಶಾಖಾಧಿಕಾರಿಗಳು, ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಗಳು.
9. ಶ್ರೀ ಲಕ್ಷ್ಮಣ್ ರೆಡ್ಡಿ, ಶಾಖಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
10. ಶ್ರೀಮತಿ ಸುನಿತ .ಎಸ್, ಶಾಖಾಧಿಕಾರಿ, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ.
11. ಶ್ರೀ ಪಾಪಣ್ಣ, ಶಾಖಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
12. ಶ್ರೀಮತಿ ಆರ್.ಶಾಂತಿ, ಪೀಠಾಧಿಕಾರಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ).

ಕರ್ನಾಟಕ ಮಾಹಿತಿ ಆಯೋಗದ 2017-18ನೇ ಸಾಲಿನ ವಾರ್ಷಿಕ ವರದಿಗೆ ಸಂಬಂಧಿಸಿದಂತೆ ಮೇಲ್ಕಂಡ ಇಲಾಖೆಗಳು ತನ್ನ ವ್ಯಾಪ್ತಿಗೆ ಒಳಪಡುವ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳಿಂದ ಮಾಹಿತಿಯನ್ನು ಪಡೆದು ಮಾಹಿತಿ ಹಕ್ಕು ಅಧಿನಿಯಮ ಕಲಂ 25(1)ರನ್ವಯ ಪ್ರತಿವರ್ಷ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ವಾರ್ಷಿಕ ವರದಿಯನ್ನು ಸಿದ್ಧಪಡಿಸಿ, ವಿಧಾನ ಮಂಡಲದ ಉಭಯ ಸದನಗಳಲ್ಲಿ ಕಡ್ಡಾಯವಾಗಿ ಮಂಡಿಸಬೇಕಾಗಿರುವುದರಿಂದ ಮೇಲಿನ ಇಲಾಖೆಯ ವಾರ್ಷಿಕ ವರದಿಗೆ ಸಂಬಂಧಿಸಿದ ಮಾಹಿತಿಯನ್ನು ಸಲ್ಲಿಸದೆ ಇರುವುದರಿಂದ ಇಲಾಖೆಯ ಮುಖ್ಯಸ್ಥರೊಂದಿಗೆ ಸಭೆಯನ್ನು ಕರೆಯಲಾಗಿದೆ.

1. **ಕಾರ್ಮಿಕ ಇಲಾಖೆ-** ಇಲಾಖೆಯ ಉಪ ಕಾರ್ಯದರ್ಶಿಯವರು ವಾರ್ಷಿಕ ವರದಿಗೆ ಸಂಬಂಧಿಸಿದ ಮಾಹಿತಿಯನ್ನು ಸಿದ್ಧಪಡಿಸಿದ್ದು, ಇಲಾಖಾ ಕಾರ್ಯದರ್ಶಿಯವರು ಸದನದ ಅಧಿವೇಶನದ ಕರ್ತವ್ಯದಲ್ಲಿದ್ದು, ಸದನ ಮುಕ್ತಾಯವಾದ ನಂತರ ಮುಖ್ಯಸ್ಥರ ಸಹಿಯೊಂದಿಗೆ ವರದಿಯ ಮಾಹಿತಿಯನ್ನು 07 ದಿನಗಳೊಳಗಾಗಿ ಆಯೋಗಕ್ಕೆ ಸಲ್ಲಿಸುವುದಾಗಿ ತಿಳಿಸಿದರು.

2. **ಲೋಕೋಪಯೋಗಿ ಇಲಾಖೆ**– ಇಲಾಖೆಯ ಉಪ ಕಾರ್ಯದರ್ಶಿರವರು ವಾರ್ಷಿಕ ವರದಿಗೆ ಸಂಬಂಧಿಸಿರುವ ಮಾಹಿತಿಯನ್ನು ಈಗಾಗಲೇ ನೀಡಿದ್ದು, 2018–19ನೇ ಸಾಲಿನ ವಾರ್ಷಿಕ ವರದಿಯನ್ನು ಶೀಘ್ರಗತಿಯಲ್ಲಿ ಸಲ್ಲಿಸುವುದಾಗಿ ತಿಳಿಸಿದರು.

3. **ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ**– ಇಲಾಖೆಯ ಅಧೀನ ಕಾರ್ಯದರ್ಶಿ (ಸೇ ಮತ್ತು ಸ)ರವರು ವರದಿಗೆ ಸಂಬಂಧಿಸಿದ ಮಾಹಿತಿಯನ್ನು ಸಿದ್ಧಪಡಿಸಿದ್ದು, ಇಲಾಖಾ ಕಾರ್ಯದರ್ಶಿಯವರು ಸದನದ ಅಧಿವೇಶನದ ಕರ್ತವ್ಯದಲ್ಲಿದ್ದು, ಸದನ ಮುಕ್ತಾಯವಾದ ನಂತರ ಮುಖ್ಯಸ್ಥರ ಸಹಿಯೊಂದಿಗೆ ವರದಿಯ ಮಾಹಿತಿಯನ್ನು 07 ದಿನಗಳೊಳಗಾಗಿ ಆಯೋಗಕ್ಕೆ ಸಲ್ಲಿಸುವುದಾಗಿ ತಿಳಿಸಿದರು.

4. **ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ**– ಇಲಾಖೆಯ ಅಧೀನ ಕಾರ್ಯದರ್ಶಿಗಳು (ಆಡಳಿತ–1) ರವರು ವರದಿಗೆ ಸಂಬಂಧಿಸಿದ ಮಾಹಿತಿಯು ಈಗಾಗಲೇ ಸಿದ್ಧಪಡಿಸಿದ್ದು, ಪ್ರಸ್ತುತ ಇಲಾಖಾ ಪ್ರಧಾನ ಕಾರ್ಯದರ್ಶಿಗಳು ಸದನದ ಅಧಿವೇಶನದ ಕರ್ತವ್ಯದಲ್ಲಿದ್ದು, ಸದನ ಮುಕ್ತಾಯವಾದ ನಂತರ ವಾರ್ಷಿಕ ವರದಿಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಧಾನ ಕಾರ್ಯದರ್ಶಿಗಳ ಸಹಿಯೊಂದಿಗೆ ಆಯೋಗಕ್ಕೆ ದಿನಾಂಕ: 26–12–2018 (ಬುಧವಾರ) ರಂದು ಸಲ್ಲಿಸುವುದಾಗಿ ತಿಳಿಸಿರುತ್ತಾರೆ.

5. **ಸಮಾಜ ಕಲ್ಯಾಣ ಇಲಾಖೆ**– ಇಲಾಖೆಯ ಅಧೀನ ಕಾರ್ಯದರ್ಶಿ ರವರು ವಾರ್ಷಿಕ ವರದಿಗೆ ಸಂಬಂಧಿಸಿದಂತೆ ತಮ್ಮ ಅಧೀನದಲ್ಲಿರುವ 07 ಇಲಾಖೆಗಳಿಂದ ಮಾಹಿತಿಯು ಬರಬೇಕಾಗಿದ್ದು, ಮಾಹಿತಿಯನ್ನು ಸಂಗ್ರಹಿಸಿ ತದನಂತರ ಕ್ರೋಢೀಕರಿಸಿ ವರದಿಯನ್ನು ದಿನಾಂಕ: 31–12–2018ರೊಳಗಾಗಿ ಆಯೋಕ್ಕೆ ಸಲ್ಲಿಸುವುದಾಗಿ ತಿಳಿಸಿರುತ್ತಾರೆ.

6. **ನಗರಾಭಿವೃದ್ಧಿ ಇಲಾಖೆ**– ಈ ಇಲಾಖೆಯ ಅಧೀನ ಕಾರ್ಯದರ್ಶಿ ರವರು ವಾರ್ಷಿಕ ವರದಿಗೆ ಸಂಬಂಧಿಸಿದಂತೆ ತಮ್ಮ ಅಧೀನದಲ್ಲಿರುವ 04 ಇಲಾಖೆಗಳಿಂದ ಮಾಹಿತಿಯು ಬರಬೇಕಾಗಿದ್ದು, ಮಾಹಿತಿಯನ್ನು ಸಂಗ್ರಹಿಸಿ ತದನಂತರ ಕ್ರೋಢೀಕರಿಸಿ ವರದಿಯನ್ನು ದಿನಾಂಕ: 31–12–2018ರೊಳಗಾಗಿ ಆಯೋಕ್ಕೆ ಸಲ್ಲಿಸುವುದಾಗಿ ತಿಳಿಸಿರುತ್ತಾರೆ.

7. **ರಾಜ್ಯಪಾಲರವರ ಕಾರ್ಯದರ್ಶಿಗಳು**– ಇಲಾಖೆಯ ಶಾಖಾಧಿಕಾರಿಗಳು ವಾರ್ಷಿಕ ವರದಿಗೆ ಸಂಬಂಧಿಸಿದಂತೆ ಅಪೂರ್ಣ ಮಾಹಿತಿಯನ್ನು ಸಲ್ಲಿಸಿದ್ದು, ಪೂರ್ಣ ಮಾಹಿತಿಯನ್ನು ಶೀಘ್ರವಾಗಿ ಆಯೋಗಕ್ಕೆ ಸಲ್ಲಿಸುವಂತೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಸೂಚಿಸಿರುತ್ತಾರೆ.

8. **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**– ಇಲಾಖೆಯ ಶಾಖಾಧಿಕಾರಿಗಳು ವಾರ್ಷಿಕ ವರದಿಗೆ ಸಂಬಂಧಿಸಿದ ಮಾಹಿತಿಯನ್ನು ದಿನಾಂಕ: 26–12–2018 (ಬುಧವಾರ) ರಂದು ಆಯೋಗಕ್ಕೆ ಸಲ್ಲಿಸುವುದಾಗಿ ತಿಳಿಸಿದರು.

9. **ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ**– ಇಲಾಖೆಯ ಶಾಖಾಧಿಕಾರಿಗಳು ವಾರ್ಷಿಕ ವರದಿಗೆ ಸಂಬಂಧಿಸಿದ ಮಾಹಿತಿಯನ್ನು ದಿನಾಂಕ: 27–12–2018 (ಗುರುವಾರ) ರಂದು ಆಯೋಗಕ್ಕೆ ಸಲ್ಲಿಸುವುದಾಗಿ ತಿಳಿಸಿದರು.

10. **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**– ಇಲಾಖೆಯ ಶಾಖಾಧಿಕಾರಿಗಳು ಮಾಹಿತಿ ಆಯೋಗಕ್ಕೆ ಇಲಾಖೆಗೆ ಸಂಬಂಧಿಸಿದ ಮಾಹಿತಿಯನ್ನು ಅಧೀನ ಕಾರ್ಯದರ್ಶಿಗಳ ಸಹಿಯೊಂದಿಗೆ ಆಯೋಗಕ್ಕೆ ಸಲ್ಲಿಸಿದ್ದು, ಇಲಾಖಾ ಕಾರ್ಯದರ್ಶಿಯವರು ಸದನದ ಅಧಿವೇಶನದ ಕರ್ತವ್ಯದಲ್ಲಿದ್ದು, ಸದನ ಮುಕ್ತಾಯವಾದ ನಂತರ ಮುಖ್ಯಸ್ಥರ ಸಹಿಯೊಂದಿಗೆ ವರದಿಯ ಮಾಹಿತಿಯನ್ನು ದಿನಾಂಕ: 29–12–2018 (ಶನಿವಾರ)ದೊಳಗೆ ಆಯೋಗಕ್ಕೆ ಸಲ್ಲಿಸುವುದಾಗಿ ತಿಳಿಸಿರುತ್ತಾರೆ.

11. **ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ–ಆಡಳಿತ)**– ಕಛೇರಿಯ ಪೀಠಾಧಿಕಾರಿರವರು ವಾರ್ಷಿಕ ವರದಿಗೆ ಸಂಬಂಧಿಸಿದ ಮಾಹಿತಿಯನ್ನು ಸಲ್ಲಿಸಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

ದಿನಾಂಕ: 20–12–2018ರ ಸಭೆಗೆ 1) ಆರ್ಥಿಕ ಇಲಾಖೆ, 2) ಐ.ಟಿ. ಬಿ.ಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ 3) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ– ಈ ಮೂರು ಇಲಾಖಾ ಮುಖ್ಯಸ್ಥರು ಸಭೆಗೆ ಗೈರು ಹಾಜರಾಗಿರುತ್ತಾರೆ. ಈ ಇಲಾಖೆಗಳು ಮಾಹಿತಿ ನೀಡಿರುವುದಿಲ್ಲದಿರುವುದರಿಂದ ವಾರ್ಷಿಕ ವರದಿಯಲ್ಲಿ ಯಥಾವತ್ತಾಗಿ ನಮೂದಿಸಿ ಉಭಯ ಸದನಗಳಲ್ಲಿ ಮಂಡಿಸಲಾಗುವುದೆಂದು ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಸಭೆಯಲ್ಲಿ ತಿಳಿಸಿದರು.

ಸಭೆಗೆ ಹಾಜರಾಗಿದ್ದ ಇಲಾಖಾ ಅಧಿಕಾರಿಗಳಿಗೆ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ದಿನಾಂಕ: 31–12–2018ರೊಳಗೆ ಇಲಾಖೆಗಳು ವಾರ್ಷಿಕ ವರದಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡದಿದ್ದಲ್ಲಿ, ಮಾಹಿತಿ ನೀಡದಿರುವ ಇಲಾಖೆಗಳನ್ನು ಹೊರತುಪಡಿಸಿ 2017–18ನೇ ಸಾಲಿನ ವಾರ್ಷಿಕ ವರದಿಯನ್ನು ಸಿದ್ಧಪಡಿಸುವುದಾಗಿ ತಿಳಿಸುತ್ತಾ, ಮುಂಬರುವ 2018–19ನೇ ಸಾಲಿನ ವಾರ್ಷಿಕ ವರದಿಯನ್ನು ಶೀಘ್ರವಾಗಿ ಆಯೋಗಕ್ಕೆ ಸಲ್ಲಿಸುವಂತೆ ಇಲಾಖಾ ಮುಖ್ಯಸ್ಥರಿಗೆ ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

20/1/2011

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು